ಎರಡನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ

# ಸಿಸಿ ನಂಬರ 3276/2017

## ದೋಷಾರೋಪಣೆ

ನಾನು , ರೂಪಾ ಮಟ್ಟಿ,
ಬಿ.ಎಸ್ ಸಿ., ಎಲ್ಎಲ್.ಎಮ್.,
*2* ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ಗೋಕಾಕ.

ಆರೋಪಿತನ ಹೆಸರುಃ **1)** ಬಸಪ್ಪ ನಾಗಪ್ಪ ಡಬ್ಬನವರ
ವಯಸ್ಸುಃ 22 ವರ್ಷ. ಉದ್ಯೋಗಃ ಕೂಲಿ ಕೆಲಸ.
ಸಾಃ ಖನಗಾಂವ, ತಾಃ ಗೋಕಾಕ.

ನಿಮ್ಮ ಮೇಲೆ ಹೊರೆಸುವ ದೋಷಾರೋಪಣೆ ಏನೆಂದರೆ,

ದಿಃ 10-01-2017 ರಂದು ರಾತ್ರಿ 1-00 ಗಂಟೆ ಸುಮಾರಿಗೆ ಗೋಕಾಕ ಗ್ರಾಮೀಣ ಪೊಲೀಸ ಠಾಣೆಯ ವ್ಯಾಪ್ತಿಯಲ್ಲಿರುವ ಬರುವ ಖನಗಾಂವ ಗ್ರಾಮದ ಬಸ್ಸ ಸ್ಟ್ಯಾಂಡ ಹತ್ತಿರ ಇರುವ ಚಾಸಾ-1 ಮತ್ತು 4 ರವರ ಅಂಗಡಿಯನ್ನು 1 ನೇ ಆರೋಪಿತನಾದ ನೀನು ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕನೊಂದಿಗೆ ಕೂಡಿಕೊಂಡು ಅಂಗಡಿಯ ಶೆಟರ ಬಾಗಿಲ ಮತ್ತು ಕೀಲಿ ಮುರಿದು ಅಂಗಡಿಯೊಳಗೆ ಹೊಕ್ಕು ಅತಿಕ್ರಮಣ ಪ್ರವೇಶ ಮಾಡಿ ಕಲಂ. 457 ಭಾ.ದಂ.ಸಂ. ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ, ವೇಳೆಯಲ್ಲಿ 1 ನೇ ಆರೋಪಿತನಾದ ನೀನು ಕಾನೂನಿನೊಂದಿಗೆ ಸಂಘರ್ಷಕ್ಕೆ ಒಳಪಟ್ಟ ಬಾಲಕ ಇಬ್ಬರು ಸೇರಿಕೊಂಡು ಚಾಸಾ-1 ರವರ ಅಂಗಡಿಯಲ್ಲಿ ಸುಮಾರು ರೂ.11,000/-ಗಳ ಕಿಮ್ಮತ್ತಿನ ಮೊಬೈಲ ಹಾಗೂ ಮೊಬೈಲ ಸಾಮಾನುಗಳು ಮತ್ತು ಚಿಲ್ಲರೆ ಹಣವನ್ನು ಕಳುವು ಮಾಡಿ ಕಲಂ.380 ಭಾ.ದಂ.ಸಂ. ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಮಾಡಿರುವಿರಿ.

ಸದರಿ ಅಪರಾಧಗಳು ಇದೇ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದರಿಂದ ಅವು ನನ್ನಿಂದ ವಿಚಾರಣೆ ಆಗುತ್ತವೆ ಎಂದು ತಿಳಿಯಬಯಸುತ್ತೇನೆ.

ಪ್ರಃ 1 ನಿನಗೆ ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ?

ಉಃ

ಪ್ರಃ 2 ನೀನು ಗುನ್ನಾ ಕಬೂಲಿ ಆಗುವಿರೋ ಅಥವಾ ವಿಚಾರಣೆ ಆಗಬೇಕೋ?

ಉಃ

(ಮೇಲಿನ ಆಪಾದನೆಯನ್ನು ಆರೋಪಿತರಿಗೆ ಓದಿ ಹೇಳಿ ಅವರಿಂದ ಬಂದ ಉತ್ತರಗಳನ್ನು ನನ್ನ ಸ್ವಅಕ್ಷರಗಳಲ್ಲಿ ಬರಕೊಂಡೆ ಅಂತಾ ದೃಢೀಕರಿಸುತ್ತೇನೆ)

ಸಹಿ/-

ಸ್ಥಳಃ ಗೋಕಾಕ
ದಿಃ 16-01-2023

2 ನೇ ಹೆ.ದಿ.ನ್ಯಾ.ದಂ.,ಗೋಕಾಕ.